ಪಿ.ಡಬ್ಲ್ಯೂ.1

ಸಾಕ್ಷಿಗೆ ದಿನಾಂಕ : 17-10-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ.ಎಸ್.ಎಸ್.ಜೆ ವಕೀಲರಿಂದ ಆರೋಪಿ ಪರವಾಗಿ

1. ನಿಮ್ಮ ಖುದ್ದು ಊರು ಯಾವುದೇ ಎಂದರೆ ಸಾಕ್ಷಿಯು ಕಾಡರಕೊಪ್ಪ ಎಂದು ಹೇಳುತ್ತಾರೆ. ನಾನು ಈಗ ಮುಧೋಳದಲ್ಲಿ ವಾಸಿಸುತ್ತೇನೆ. ಮೊದಲು ನಾನು ಯಡಹಳ್ಳಿ ಗ್ರಾಮದಲ್ಲಿ ಇದ್ದು, ಈಗ ಅಲ್ಲಿ ವಾಸಿಸುತ್ತಿಲ್ಲ. ಕಾಡರಕೊಪ್ಪ ಗ್ರಾಮದಲ್ಲಿ ನನ್ನ ಜಮೀನು ಇವೆ. ಮುಧೋಳದಲ್ಲಿಯು ಸಹ ಜಮೀನುಗಳು ಇವೆ. ಆರೋಪಿತ ನನಗೆ 5-6 ವರ್ಷಗಳಿಂದ ಪರಿಚತ. ಆರೋಪಿತ ರಿಯಲ್ ಎಸ್ಟೇಟ ಕೆಲಸ ಮಾಡುತ್ತಾನೆ. ನಾನು ವ್ಯವಸಾಯ ಮಾಡುತ್ತೇನೆ. ನೀವು ರಿಯಲ್ ಎಸ್ಟೇಟ್ ಕೆಲಸ ಮಾಡುತ್ತೀರಾ ಎಂದರೆ ಸಾಕ್ಷಿಯು ಯಾವಾಗಲಾದರೂ ಪ್ಲಾಟ ಖರೀದಿಸಿ ಮಾರುತ್ತೇನೆ ಎಂದು ಹೇಳುತ್ತಾರೆ. ಆರೋಪಿತ ರಿಯಲ್ ಎಸ್ಟೇಟ ಕೆಲಸ ಮಾಡುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತ ಕೂಲಿ ಕೆಲಸ ಮಾಡುತ್ತಾನೆ ಎಂದರೆ ಸರಿಯಲ್ಲ. ಆರೋಪಿತ ಯಾರಿಗಾದುರು ಪ್ಲಾಟ ಕೊಡಿಸಿದ ಬಗ್ಗೆ ಗೊತ್ತಿದೆಯಾ ಎಂದರೆ ಸಾಕ್ಷಿ ನನಗೆ ಕೊಡಿಸಿದ್ದ ಎಂದು ಹೇಳುತ್ತಾರೆ. 2019 ರಲ್ಲಿ ನನಗೆ ಆರೋಪಿತ ಒಂದು ಪ್ಲಾಟ ಕೊಡಿಸಿದ್ದು, ಯಾರಿಂದ ಕೊಡಿಸಿದ್ದ ಯಾವ ಪ್ಲಾಟ ಕೊಡಿಸಿದ್ದ ಎಂದು ನೆನಪಿಲ್ಲ. ಆರೋಪಿತ ರಿಯಲ್ ಎಸ್ಟೇಟ ಕೆಲಸ ಮಾಡುತ್ತಿದ್ದರಿಂದ ಸಾಕಷ್ಟು ಆರ್ಥಿಕ ಸಾಮರ್ಥ್ಯ ಹೊಂದಿದ ವ್ಯಕ್ತಿ ಎಂದರೆ ಅದು ಸಂಬಂಧ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತ 2019 ರಲ್ಲಿ ಪ್ಲಾಟ ಕೊಡಿಸಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

2. ಆರೋಪಿತ ಯಾವ ಕಾಲಕ್ಕೂ ನಿಮ್ಮ ಬಳಿ 19 ಲಕ್ಷ 50 ಸಾವಿರ ರೂಪಾಯಿ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಬಳಿ 19 ಲಕ್ಷ 50 ಸಾವಿರ ಮೊತ್ತ ಸಾಲ ಪಡೆಯುವ ಅವಶ್ಯಕತೆ ಆರೋಪಿತನಿಗೆ ಯಾವತ್ತು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೆ ನೀವು 19 ಲಕ್ಷ 50 ಸಾವಿರ ರೂಪಾಯಿ ಯಾವ ದಿನಾಂಕದಂದು ನೀಡಿದಿರಿ ಎಂದರೆ 3 ಕಂತುಗಳಲ್ಲಿ ನೀಡಿದ್ದು, ಯಾವ ದಿನಾಂಕದಂದು ನೀಡಿದೆ ಎಂದು ನೆನಪಿಲ್ಲ. ಮೊದಲನೇ ಕಂತು 5 ಲಕ್ಷ ಜನೇವರಿ 2021 ರಲ್ಲಿ, 2 ನೇ ಕಂತು ಅದೇ ತಿಂಗಳಿನಲ್ಲಿ ಮತ್ತೆ 5 ಲಕ್ಷ, 3 ನೇ ಕಂತು 9 ½ ಲಕ್ಷ ಅದೇ ತಿಂಗಳಲ್ಲಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಹಣ ಕೊಡುವ ಸಮಯದಲ್ಲಿ ನಾನು ಮತ್ತು ಆರೋಪಿತನನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ನಾನು ಮೇಲೆ ನಮೂದಿಸಿದ ಮೊತ್ತವನ್ನು ನಗದು ರೂಪದಲ್ಲಿ ಮನೆಯಲ್ಲಿ ಇದ್ದ ಹಣವನ್ನು

ನೀಡಿರುತ್ತೇನೆ. ಯಾವ ಬ್ಯಾಂಕಿನಿಂದ ಸದರಿ ಮೊತ್ತ ತಂದಿರಿ ಎಂದರೆ ಸಾಕ್ಷಿಯು ಬೆಳೆ ಮಾರಾಟ ಮಾಡಿ ಬಂದ ಮೊತ್ತವನ್ನು ನೀಡಿದ್ದು, ಬ್ಯಾಂಕಿನಿಂದ ತಂದಿಲ್ಲ ಎಂದು ಹೇಳುತ್ತಾರೆ. ಯಾವ ಬೆಳೆ ಮಾರಾಟ ಮಾಡಿದ್ದೀರಿ ಎಂದರೆ ಗೋಧಿ, ಅರಿಶಿಣ, ಕಬ್ಬು, ಬಾಳೆ ಮಾರಾಟ ಮಾಡಿದ್ದೆ ಎಂದು ಹೇಳುತ್ತಾರೆ. ಮಂಟೂರ ಮತ್ತು ಮುಧೋಳದಲ್ಲಿ ಇದ್ದ ಜಮೀನಿನಲ್ಲಿ 1 ಎಕರೆ ಬಾಳೆ ಇತ್ತು. ಬಾಳೆ ಮಾರಾಟದಿಂದ 5 ರಿಂದ 6 ಲಕ್ಷ ಆದಾಯ ಆಗಿತ್ತು. ಕಾಡರಕೊಪ್ಪ ಮತ್ತು ಯರಗುದ್ರಿಯಲ್ಲಿ ಗೋಧಿ ಬೆಳೆ ಬೆಳೆದಿದ್ದು, 40 ಎಕರೆ ಬೆಳೆದಿದ್ದು, ಎಷ್ಟು ಕ್ವಿಂಟಲ್ ಮಾರಾಟ ಮಾಡಿದೆ ಎಂದು ಗೊತ್ತಿಲ್ಲ. ಸದರಿ ಗೋಧಿ ಬೆಳೆಯನ್ನು ಮುಧೋಳದಲ್ಲಿ ಮಾರಾಟ ಮಾಡಿರುತ್ತೇನೆ. ಸದರಿ ಗೋಧಿ ಮಾರಾಟದಿಂದ 8 ರಿಂದ 8 ½ ಲಕ್ಷ ಆದಾಯ ಬಂದಿರುತ್ತದೆ. ಅರಿಶಿಣವನ್ನು ಯರಿಗುದ್ರಿಯಲ್ಲಿ ಬೆಳೆದಿದ್ದು 2 ರಿಂದ 3 ಲಕ್ಷ ರೂಪಾಯಿಗೆ ಮಾರಾಟ ಮಾಡಿರುತ್ತೇನೆ. ಅರಿಶಿಣವನ್ನು ಕ್ವಿಂಟಲಗೆ 6 ಸಾವಿರದಂತೆ ಸಾಂಗಲಿಯ ವ್ಯಕ್ತಿಗೆ ಮಾರಾಟ ಮಾಡಿದ್ದು ಆತನ ಹೆಸರು ಗೊತ್ತಿಲ್ಲ. ನಾನು ಅರಿಶಿಣವನ್ನು ಡಿಸೆಂಬರ ತಿಂಗಳಲ್ಲಿ ಮಾರಾಟ ಮಾಡಿರುತ್ತೇನೆ. ಅರಿಶಿಣವನ್ನು ಜೂನ್ ಮತ್ತು ಅಗಷ್ಟನಲ್ಲಿ ನಾಟಿ ಮಾಡುತ್ತಾರೆ. ಅರಿಶಿಣವನ್ನು ಕುದಿಸಿ ಮಾರಾಟ ಮಾಡಿರುತ್ತೇನೆ. ನೀವು ಅರಿಶಿಣವನ್ನಾಗಲೀ, ಗೋಧಿಯನ್ನಾಗಲೀ ಯಾವತ್ತು ಬೆಳೆದಿಲ್ಲ, ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಅರಿಶಿಣ, ಗೋಧಿ ಇತ್ಯಾದಿ ಬೆಳೆ ಬೆಳೆದಿದ್ದಕ್ಕಾಗಲೀ, ಅದನ್ನು ಮಾರಾಟ ಮಾಡಿದಿದ್ದಾಕ್ಕಾಗಲೀ ಅದರ ಬಗ್ಗೆ ದಾಖಲಾತಿ ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ಪ್ರಸಂಗ ಬಂದಿಲ್ಲ ಎಂದು ಹೇಳುತ್ತಾರೆ.

3. ಆರೋಪಿತನಿಗೆ ಯಾವುದೇ ಚೆಕ್ಕಿನ ವ್ಯವಹಾರ ಮಾಡುವ ಪರಿಸ್ಥಿತಿ ಇಲ್ಲ ಎಂದರೆ ಆರೋಪಿತ ಹಣ ಇದೆ ಎಂದು ಚೆಕ ನೀಡಿದ ಎಂದು ಹೇಳುತ್ತಾರೆ. ನಿಮ್ಮ ಪ್ರಕಾರ ಚೆಕ ಪಡೆಯುವ ಸಮಯದಲ್ಲಿ ನೀವು ಮತ್ತು ಆರೋಪಿತರನ್ನು ಹೊರತುಪಡಿಸಿ ಬೇರೆ ಯಾರಾದರೂ ಇದ್ದರಾ ಎಂದರೆ ಸಾಕ್ಷಿ ಬೇರೆ ಯಾರು ಇರಲಿಲ್ಲ ಎಂದು ಹೇಳುತ್ತಾರೆ. ಆರೋಪಿತ ನಿಮಗೆ ಯಾವ ದಿನಾಂಕದಂದು ಚೆಕ ನೀಡಿದ ಎಂದರೆ ಸಾಕ್ಷಿಯು ಡಿಸೆಂಬರ 2021 ರಲ್ಲಿ ನೀಡಿದ್ದು, ದಿನಾಂಕ ನೆನಪಿಲ್ಲ ಎಂದು ಹೇಳುತ್ತಾರೆ. ಚೆಕ ನಂಬರ ನನಗೆ ಗೊತ್ತಿಲ್ಲ. ಆರೋಪಿಗೆ ಇಂಗ್ಲೀಷ ಮತ್ತು ಕನ್ನಡ ಭಾಷೆ ಬರೆಯಲು - ಓದಲು ಬರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿ-1 ನ್ನು ತೋರಿಸುತ್ತಿದ್ದು, ಅದರ ಮೇಲೆ ಬರವಣಿಗೆ ನಿಮ್ಮದು

**ಪಿ.ಡಬ್ಲ್ಯೂ.1**

ಎಂದರೆ ಸರಿಯಲ್ಲ. ಸದರಿ ಚೆಕನ್ನು ಯಾರು ಬರೆದರು ಎಂದರೆ ಸಾಕ್ಷಿಯು ಬರೆದಿದ್ದನ್ನು ತಂದಕೊಟ್ಟರು ಯಾರು ಬರೆದಿದ್ದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-1(ಎ) ಸಹಿ ಆರೋಪಿತನದಲ್ಲ ಎಂದರೆ ಸರಿಯಲ್ಲ. ಚೆಕ ಮೇಲೆ ಇರುವ ಸಹಿ ಮತ್ತು ಆರೋಪಿತನ ವಕಾಲತ್ ಮೇಲಿರುವ ಸಹಿ ಎರಡು ಬೇರೆ ಬೇರೆ ಇವೆ ಎಂದರೆ ನನಗೆ ಗೊತ್ತಿಲ್ಲ. ಚೆಕ್ ಮೇಲಿನ ಸಹಿ ಮತ್ತು ವಕಾಲತ್ ಮೇಲೆ ಇರುವ ಸಹಿ ಎರಡು ಬೇರೆ ಬೇರೆ ಕಾಣಿಸುತ್ತವೆ ಎಂದರೆ ನನಗೆ ಗೊತ್ತಿಲ್ಲ. ನೀವು ಆರೋಪಿತನಿಂದ ಹಣ ಕಬಳಿಸುವ ಉದ್ದೇಶದಿಂದ ಆರೋಪಿತನ ಸಹಿ ಇಲ್ಲದ ಚೆಕನ್ನು ಹಾಜರಪಡಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಕಡೆಯಿಂದ ಯಾವತ್ತು, ಯಾವುದೇ ದುಡ್ಡನ್ನು ಪಡೆದುಕೊಂಡಿಲ್ಲ, ಚೆಕ್ ಮೇಲೆ ಇರುವ ಸಹಿ ಆರೋಪಿತನದ್ದು ಅಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ., ಮುಧೋಳ